ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 09-02-1980.

# *ಮಧುಬನ ನಿವಾಸಿಗಳ ವಿಶೇಷತೆ*

(मधुबन निवासियों की विशेषता).

ಇಂದು ವಿಶೇಷವಾಗಿ ಮಧುಬನ ನಿವಾಸಿ ಭಾಗ್ಯಶಾಲಿ ಆತ್ಮರೊಂದಿಗೆ ಮಿಲನ ಮಾಡುವುದಕ್ಕಾಗಿ ಬಂದಿದ್ದೇವೆ. ಮಧುಬನ ನಿವಾಸಿಗಳ ಮಹಿಮೆಯನ್ನು ಇಂದಿನ ದಿನದವರೆಗೂ ಭಕ್ತರು ಹಾಡುತ್ತಿದ್ದಾರೆ. ಮತ್ತು ಬ್ರಾಹ್ಮಣರೂ ಹಾಡುತ್ತಿದ್ದಾರೆ ಏಕೆಂದರೆ ಮಧುಬನ ಧರಣಿಯ ಮಹಿಮೆಯಿದೆ, ಅಂದಮೇಲೆ ಧರಣಿಯಲ್ಲಿರುವರ ಮಹಿಮೆಯು ಸ್ವತಹವಾಗಿಯೇ ಮಹಾನ್ ಆಗಿಬಿಡುತ್ತದೆ. ಮಧುಬನದವರಿಗೆ ಡ್ರಾಮಾನುಸಾರವಾಗಿ ಎಲ್ಲಾ ಮಾತುಗಳಲ್ಲಿಯೂ ವಿಶೇಷವಾದ ಅವಕಾಶವು ಸಿಕ್ಕಿದೆ. ಬಾಪ್‌ದಾದಾರವರ ಚರಿತ್ರೆಯಭೂಮಿ, ಕರ್ಮಭೂಮಿಯಾಗಿರುವ ಕಾರಣದಿಂದ, ಸ್ಥಾನವು ಸ್ಥಿತಿಯ ಮೇಲೆ ಪ್ರಭಾವವು ಹೇಗೆ ಬೀಳುತ್ತದೆಯೋ ಹಾಗೆಯೇ ಸ್ವಸ್ಥಿತಿಯಲ್ಲಿ ಶ್ರೇಷ್ಠತೆಯನ್ನು ತರುವ ಹಾಗೂ ತೀವ್ರ ಪುರುಷಾರ್ಥಿಯಾಗುವ ಸ್ಥಾನವಾಗಿರುವ ಕಾರಣದಿಂದ, ಮಧುಬನದವರಿಗೆ ವಿಶೇಷವಾದ ಅವಕಾಶವಿದೆ. ಮನಸ್ಸನ್ನು ವಿಶ್ವಕಲ್ಯಾಣಕಾರಿ ವೃತ್ತಿಯಲ್ಲಿ ಶಕ್ತಿಶಾಲಿಯಾಗುವ ಅರ್ಥಾತ್ ವಿಶ್ವಸೇವೆಯ ಪ್ರಧಾನ ಕೇಂದ್ರವು 'ಮಧುಬನ'ವಾಗಿದೆ. ಮಧುಬನದಲ್ಲಿ ಬರುತ್ತಿದ್ದಂತೆಯೇ ಅತಿಥಿಗಳ ಮನಸಾ-ವಾಚಾ-ಕರ್ಮಣಾ ಸೇವೆಯ ಜೊತೆಜೊತೆಯಲ್ಲಿ, ಆತ್ಮಿಕ ವಾತಾವರಣವನ್ನು ಉಂಟುಮಾಡುವ ಸೇವೆಯ ವಿಶೇಷ ಅವಕಾಶವಿದೆ. ಮಧುಬನದವರನ್ನು ನೋಡುತ್ತಾ ಸರ್ವಾತ್ಮರು ಸಹಜವಾಗಿ ಫಾಲೋ ಮಾಡುವುದನ್ನು ಕಲಿಯುತ್ತಾರೆ. ಹೇಗೆ ಮಧುಬನವು ಬೇಹದ್ದಿನದಾಗಿದೆಯೋ ಹಾಗೆಯೇ ಮಧುಬನ ನಿವಾಸಿಗಳಿಗೂ ಸಹ ಬೇಹದ್ದಿನ ಸೇವೆಯ ಅವಕಾಶವಿದೆ. ತಮ್ಮ ಕರ್ಮದ ಪ್ರಾಲಬ್ಧದ ಲೆಕ್ಕದಿಂದಂತು ಪ್ರತಿಯೊಂದು ಆತ್ಮನಿಗೆ ಯಥಾಕರ್ಮ ತಥಾ ಫಲವು ಸಿಗುತ್ತದೆ. ಆದರೆ ಎಷ್ಟಾದರೂ ಆತ್ಮರು ಬರಲಿ, ಅವರ ಸೇವೆಯಾಯಿತು ಮತ್ತು ತೃಪ್ತರಾಗಿ ಹೋದರೆಂದರೆ, ಇಷ್ಟೆಲ್ಲಾ ಆತ್ಮರ ಸಂತುಷ್ಟತೆಯ ಫಲವು ಮಧುಬನ ನಿವಾಸಿಗಳದಾಯಿತು. ಮನೆಯಲ್ಲಿ ಕುಳಿತು ಒಂದು ವೇಳೆ ಸೇವೆಯ ಫಲವು ಜಮಾ ಆಯಿತೆಂದರೆ ವಿಶೇಷತೆಯಾಯಿತಲ್ಲವೆ. ಮಧುಬನದವರಿಗೆ ಪ್ರತ್ಯಕ್ಷ ಫಲವು ಸಿಗುವುದರಲ್ಲಿಯೂ ವಿಶೇಷತೆಯಿದೆ. ಭವಿಷ್ಯ ಫಲವಂತು ಆಗುತ್ತಿರುತ್ತದೆ. ಮಧುಬನದವರಿಗೆ ಇನ್ನೂ ವಿಶೇಷವಾದ ಲಿಫ್ಟ್ ಇದೆ. ಬಾಪ್‌ದಾದಾರವರ ಪಾಲನೆಯಂತು ಸಿಗುತ್ತಿರುತ್ತದೆ, ಆದರೆ ಸಾಕಾರ ರೂಪದಲ್ಲಿ ನಿಮಿತ್ತರಾಗಿರುವ ಶ್ರೇಷ್ಠಾತ್ಮರ ಪಾಲನೆಯೂ ಸಿಗುತ್ತದೆ, ಅಂದಮೇಲೆ ಡಬಲ್ ಪಾಲನೆಯ ಲಿಫ್ಟ್ ಇದೆ ಮತ್ತು ಮಾಡಿ-ಮಾಡಲ್ಪಟ್ಟಿರುವ ಎಲ್ಲಾ ಸಾಧನಗಳು ಪ್ರಾಪ್ತಿಯಾದಾಗ- ಇಂತಹ ಶ್ರೇಷ್ಠ ಭಾಗ್ಯಶಾಲಿ ತಮ್ಮ ಶೇಷ್ಠ ಭಾಗ್ಯವನ್ನು ತಿಳಿದು ಸೇವೆಯಲ್ಲಿ ನಿಮಿತ್ತರಾಗಿ ನಡೆಯುತ್ತೀರಾ? ಹೇಗೆ ಕರ್ಮಣಾ ಸೇವೆಗಾಗಿ ಅವಿಶ್ರಾಂತ ಸೇವಾಧಾರಿಯ ಸರ್ಟಿಫಿಕೇಟನ್ನು ಕೊಟ್ಟು ಹೋಗುತ್ತಾರೆ. ಹಾಗೆಯೇ ತೀವ್ರ ಪುರುಷಾರ್ಥಿ ಅಥವಾ ನಿರಂತರ ಸಹಜಯೋಗಿಯ ಸ್ಥಿತಿಯ ಸರ್ಟಿಫಿಕೇಟನ್ನು ಕೊಡುತ್ತಾರೆಯೇ? ಎರಡೂ ಸರ್ಟಿಫಿಕೇಟುಗಳು ಜೊತೆಜೊತೆಯಲ್ಲಿ ಸಿಕ್ಕಿತೆಂದರೆ ಹೇಳಲಾಗುತ್ತದೆ ಯಜ್ಞದ ಸಮಾಪ್ತಿಯು ಸಮೀಪವಿದೆ. ಎಲ್ಲರೂ ಒಳ್ಳೆಯ ಪರಿಶ್ರಮವನ್ನು ಪಟ್ಟಿದ್ದಾರೆ. ಹಗಲು-ರಾತ್ರಿಯಲ್ಲಿ ಯಾರು ಸೇವೆಯ ಕಾರ್ಯದಲ್ಲಿ, ತನ್ನ ತನು-ಮನ ಹಾಗೂ ಶಕ್ತಿಗಳ ಖಜಾನೆಯನ್ನು ತೊಡಗಿಸಿದರೋ, ಇಂತಹವರಿಗೆ ಬಾಪ್‌ದಾದಾರವರು ಶುಭಾಷಯಗಳನ್ನು ಕೊಡುತ್ತಾರೆ. ತ್ಯಾಗವಿರುವವರಿಗೆ ಭಾಗ್ಯವು ತಾನಾಗಿಯೇ ಖುಷಿಯ ರೂಪದಲ್ಲಿ ಹಾಗೂ ಹಗುರತೆಯ ಅನುಭೂತಿಯ ರೂಪದಲ್ಲಿ ಅದೇ ಸಮಯದಲ್ಲಿಯೇ ಪ್ರಾಪ್ತಿಯಾಗುತ್ತದೆ. ಈ ಚೆಕ್ಕಿಯಿಂದ ಪ್ರತಿಯೊಬ್ಬರೂ ತಮ್ಮ ಫಲಿತಾಂಶವನ್ನು ಪರಿಶೀಲನೆ ಮಾಡಿಕೊಳ್ಳಬಹುದು- ನನ್ನಲ್ಲಿ ಎಷ್ಟು ಸಮಯ ತ್ಯಾಗ ಮತ್ತು ನಿಷ್ಕಾಮ ಭಾವವಿರುತ್ತದೆ, ನಿಮಿತ್ತ ಭಾವವಿರುತ್ತದೆ ಅಥವಾ ಮಧ್ಯ-ಮಧ್ಯದಲ್ಲಿ ಮತ್ತಾವುದಾದರೂ ಭಾವಗಳು ಮಿಕ್ಸ್ ಆಗುತ್ತದೆಯೇ? ಪರಿಶೀಲನೆ ಮಾಡಿಕೊಂಡು, ಇನ್ನು ಮುಂದಿನದಕ್ಕಾಗಿ ಪರಿವರ್ತನೆ ಮಾಡಿಕೊಳ್ಳಬೇಕು- ಇದು ಏರುವಕಲೆಯ ವಿಶೇಷ ಪುರುಷಾರ್ಥವಾಗಿದೆ.

ಇನ್ನೊಂದು ಮಾತು- ಒಂದು ವಿಶೇಷವಾದ ಗುಣವು ಎಲ್ಲರಿಗೂ ಸದಾ ಹಾಗೂ ಸಹಜವಾಗಿ ಧಾರಣೆಯಾಗಲಿ- ಹೇಗೆ ನನ್ನ ನಿಜಗುಣವಿದೆ, ಯಾವಾಗ ಅದು ನಿಜವಾಗಿ ಬಿಡುತ್ತದೆಯೋ, ಆಗ ಪ್ರಯತ್ನ ಪಡಬೇಕಾಗುವುದಿಲ್ಲ. ಸ್ವಾಭಾವಿಕವಾದ ಜೀವನವಾಗಿ ಬಿಡುತ್ತದೆ. ಅವರ ವಿಶೇಷ ಗುಣವಾಗಿದೆ- 'ಒಬ್ಬರು ಇನ್ನೊಬ್ಬರ ಬಲಹೀನತೆಯನ್ನು ಧಾರಣೆ ಮಾಡಬಾರದು, ವರ್ಣನೆ ಮಾಡಬಾರದು'. ವರ್ಣನೆಯಾಗುವುದರಿಂದ ಅದು ವಾತಾವರಣದಲ್ಲಿ ಹರಡುತ್ತದೆ. ಒಂದು ವೇಳೆ ಯಾರೇ ತಿಳಿಸುತ್ತಾರೆ ಎಂದರೂ ಸಹ, ಇನ್ನೊಬ್ಬರನ್ನು ಶುಭಭಾವನೆಯಿಂದ ಆ ಮಾತನ್ನು ದೂರ ಮಾಡಿಬಿಡಬೇಕು. ಈ ರೀತಿಯಾಗಬಾರದು- ಇವರು ತಿಳಿಸಿದರು, ನಾನು ಹೇಳಲಿಲ್ಲ. ಆದರೆ ಕೇಳಿರುವುದಂತು ಸರಿಯಲ್ಲವೆ! ಹೇಗೆ ಹೇಳುವವರಾಗುತ್ತಾರೆ, ಕೇಳುವವರೂ ಆಗುತ್ತಾರೆ. ಪರ್ಸೆಂಟೇಜಿನಲ್ಲಿ ಅಂತರವಿದೆ ಆದರೆ ಆಗುತ್ತಾರಲ್ಲವೆ? ವ್ಯರ್ಥ ಚಿಂತೆ ಅಥವಾ ಬಲಹೀನತೆಯ ಮಾತುಗಳು ನಡೆಯಬಾರದು. ಕಳೆದು ಹೋದ ಮಾತುಗಳನ್ನೂ ಸಹ ದಯಾ ಹೃದಯಿಯಾಗಿರುತ್ತಾ ಸಮಾವೇಶ ಮಾಡಿಕೊಂಡು ಬಿಡಬೇಕು. ಸಮಾವೇಶ ಮಾಡಿಕೊಂಡು ಆ ಆತ್ಮನಬಗ್ಗೆ ಶುಭಭಾವನೆಯಿಂದ ಮನಸಾ ಸೇವೆಯನ್ನು ಮಾಡುತ್ತಿರಬೇಕಾಗಿದೆ. ಯಾವಾಗ 5 ತತ್ವಗಳ ಪ್ರತಿಯೂ ತಮ್ಮ ಶುಭ ಭಾವನೆಯಿದೆ, ಇವರಂತು ಆದರೂ ಸಹಯೋಗಿ ಬ್ರಾಹ್ಮಣ ಆತ್ಮರಾಗಿದ್ದಾರೆ. ಭಲೆ ಯಾರೇ ಸಂಸ್ಕಾರಕ್ಕೆ ವಶರಾಗಿ ಉಲ್ಟಾ ಹೇಳಬಹುದು, ಮಾಡಬಹುದು ಅಥವಾ ಕೇಳುತ್ತಾರೆ ಆದರೆ ತಾವು ಅವರೊಬ್ಬರನ್ನು ಪರಿವರ್ತನೆ ಮಾಡಿರಿ. ಒಬ್ಬರಿಂದ ಇನ್ನೊಬ್ಬರವರೆಗೆ, ಎರಡನೆಯವರಿಂದ ಮೂರನೆಯವರವರೆಗೆ ಇಂತಹ ವ್ಯರ್ಥ ಮಾತುಗಳ ಮಾಲೆಯ ದೀಪಾಮಾಲೆಯಾಗಬಾರದು. ಈ ಗುಣವನ್ನು ಧಾರಣೆ ಮಾಡಿಕೊಳ್ಳಿರಿ ಯಾರದನ್ನೂ ಕೇಳುವುದು, ಹೇಳುವುದು ಮಾಡಬಾರದು ಆದರೆ ಸಮಾವೇಶ ಮಾಡಿಕೊಳ್ಳಬೇಕಾಗಿದೆ. ಸಹಯೋಗಿರುತ್ತಾ ಮನಸ್ಸಿನಿಂದ ಅಥವಾ ವಾಣಿಯಿಂದ ಅವರನ್ನೂ ಮುಂದುವರೆಸಬೇಕಾಗಿದೆ. ಆದರೆ ಆಗುವುದೇನು ಒಬ್ಬರ ಮಿತ್ರನಾಗುತ್ತಾರೆ, ಅವರೊಬ್ಬರೊಂದಿಗೆ ಇನ್ನೊಬ್ಬರು ಮಿತ್ರನಾಗುತ್ತಾರೆ, ಇನ್ನೊಬ್ಬರಿಗೆ ಮೂರನೆಯವರಾಗುತ್ತಾರೆ, ಅದೇ ರೀತಿ ವ್ಯರ್ಥ ಮಾತುಗಳ ಮಾಲೆಯೂ ದೊಡ್ಡರೂಪವನ್ನು ತೆಗೆದುಕೊಂಡು ನಾಲ್ಕೂಕಡೆಯಲ್ಲಿ ಹರಡಿಬಿಡುತ್ತದೆ. ಆದ್ದರಿಂದ ಈ ಮಾತುಗಳಲ್ಲಿ ಗಮನವಿರಲಿ, ಒಳ್ಳೆಯದು-

ಮಧುಬನದ ಪಾಂಡವರ ಏಕತೆಯ ವಿಶೇಷತೆಯೂ ಇದೆ. ಇಡೀ ಸೀಜನ್ ನಿರ್ವಿಘ್ನವಾಗಿ ನಡೆಯುತ್ತದೆಯೆಂದರೆ ನಿರ್ವಿಘ್ನಭವದ ವರದಾನಿಯಾಗಿ ಬಿಡುತ್ತೀರಲ್ಲವೆ! ಸೇವೆಯ ಸಫಲತೆಯಲ್ಲಿ ಎಲ್ಲರೂ ಉತ್ತೀರ್ಣರಾಗಿದ್ದಾರೆ. ಸೇವೆ ಮಾಡುತ್ತಿಲ್ಲ ಆದರೆ ಫಲವನ್ನು ಸೇವಿಸುತ್ತಿದ್ದೀರಿ. ಸರ್ವಬ್ರಾಹ್ಮಣ ಪರಿವಾರದ ಆಶೀರ್ವಾದದ ಅಧಿಕಾರಿಯಾಗುವುದು ಈ ಫಲವನ್ನು ಸೇವಿಸಿದಿರಾ ಅಥವಾ ಸೇವೆಯನ್ನು ಮಾಡಿದಿರಾ?

ಅವ್ಯಕ್ತ ಮುರಳಿ 09-02-1980.

***ಮಧುಬನ ನಿವಾಸಿಗಳ ವಿಶೇಷತೆ.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಮನಸಾ, ವಾಚ, ಕರ್ಮಣಾ ಸೇವೆಯೊಂದಿಗೆ ಅವ್ಯಕ್ತ ವಾತಾವರಣವನ್ನು ತಯಾರು ಮಾಡುವ ಮಧುಬನ ನಿವಾಸಿ.

2. ನಾನು ಬೇಹದ್ ಸೇವೆಯನ್ನು ಮಾಡುವ ಮದುಬನ ನಿವಾಸಿ.

3. ನಾನು ಬಾಪ್ ದಾದಾ ಮತ್ತು ನಿಮಿತ್ತವಾಗಿರುವ (ಅವ್ಯಕ್ತ ಮುರಳಿ 14-01-1980 ಗೃಹಸ್ಥರು ಕೂಡ ರುದ್ರಜ್ಞಾನ ಯಜ್ಞಕ್ಕೆ ನಿಮಿತ್ತರು) ಶ್ರೇಷ್ಠಾತ್ಮರ ಪಾಲನೆಯನ್ನು ಪಡೆದಿದ್ದೇನೆ.

4. ನಾನು ಕರ್ಮಣಾ ಸೇವೆಯಲ್ಲಿ ದಣಿವರಿಯದ ಸೇವಾಧಾರಿ & ನಿರಂತರ ಸಹಯೋಗ ಸ್ಥಿತಿ ಎರಡು ಸರ್ಟಿಫಿಕೇಟ್ಗಳನ್ನು ಜೊತೆ ಜೊತೆಯಲ್ಲಿ ಪಡೆದು ಯಜ್ಞದ ಸಮಾಪ್ತಿಯನ್ನು ಸಮೀಪಕ್ಕೆ ತಂದಿದ್ದೇನೆ.

5. ನಾನು ಸದಾ ತ್ಯಾಗಿಯಾಗಿ, ನಿಷ್ಕಾಮ ಭಾವನೆಯಿಂದ ನಿಮಿತ್ತ ಭಾವನೆಯಿಂದ ಸೇವೆಯನ್ನು ಮಾಡಿ ಪುರುಷಾರ್ಥದ ವೃದ್ಧಿ ಕಲೆಯ ಅನುಭವ ಮಾಡಿಕೊಂಡಿದ್ದೇನೆ.

6. ನಾನು ಯಾರ ಬಲಹೀನತೆಯನ್ನು ತಿಳಿದುಕೊಂಡಾಗಲು ಅವರನ್ನು ಮುಂದಕ್ಕೆ ಕರೆದುಕೊಂಡು ಹೋಗಿದ್ದೇನೆ.

7. ನಾನು ಸದಾ ನಿರ್ವಿಘ್ನಭವ ಎಂಬ ವರದಾನದ ವರದಾನಿ.

8. ನಾನು ಸರ್ವ ಬ್ರಾಹ್ಮಣ ಪರಿವಾರದ ಆಶೀರ್ವಾದಗಳಿಗೆ ಅಧಿಕಾರಿಯಾಗಿ ಫಲವನ್ನು ಸ್ವೀಕರಿಸಿದ್ದೇನೆ.